INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -1, January--February, 2025,
PageNo,60- 64
Peer -Reviewed, Refereed Journal

# ಎಚ್.ಎಸ್. ಗೋಪಾಲರಾವ್ ಅವರ 'ಮಣ್ಣೆ– ಒಂದು ಪರಿಚಯಾತ್ಮಕ ಅಧ್ಯಯನ'

**ಸುಜಾತ ಬಿ..[1]**

'ಮಣ್ಣೆ–ಒಂದು ಪರಿಚಯಾತ್ಮಕ ಅಧ್ಯಯನ' ಎಚ್.ಎಸ್. ಗೋಪಾಲರಾವ್ ಅವರ ಮಹತ್ವದ ಕೃತಿಯಾಗಿದ್ದು. ಅವರ ಸುದೀರ್ಘ ಕಾಲದ ಸಂಶೋಧನೆಯ ಹಾಗೂ ಅಪಾರ ಪರಿಶ್ರಮದ ಫಲ. ಎಚ್.ಎಸ್.ಜಿ. ಅವರೇ ಹೇಳುವಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಒಂದು ಪುಟ್ಟ ಗ್ರಾಮವಾದ 'ಮಣ್ಣೆ'ಯ ಜೊತೆಗಿನ ಅವರ ಸಂಬಂಧ ಅರ್ಧಶತಮಾನದಷ್ಟು ಹಳೆಯದು. "೧೯೭೧ರಲ್ಲಿ ವೃತ್ತಪತ್ರಿಕೆಯೊಂದಕ್ಕೆ ಪರಿಚಯ ಲೇಖನ ಬರೆಯುವ ಸಲುವಾಗಿ ಮೊದಲ ಬಾರಿಗೆ ಹೋಗಿದ್ದು; ಶಾಸನಗಳು ಮತ್ತು ಇತಿಹಾಸದ ಸಂಪರ್ಕ ಬಂದ ನಂತರ, ಅದು ನನ್ನ ಸಂಶೋಧನೆಯ ಪ್ರಮುಖ ಕಾರ್ಯಕ್ಷೇತ್ರವಾಯಿತು."[೧] ಅವರ ಗೆಳೆಯರು ಅವರನ್ನು 'ಮಣ್ಣೆಯ ಪಾಳೆಗಾರ' ಎಂದು ಕರೆಯುತ್ತಿದ್ದುದು, ಮಣ್ಣೆಯ ಬಗೆಗಿನ ಅವರ ತಿಳುವಳಿಕೆಯ ಅಧಿಕೃತತೆಯನ್ನು ಖಚಿತಪಡಿಸುತ್ತದೆ.

"ಸುಮಾರು ಐವತ್ತು ವರ್ಷಗಳಷ್ಟು ಓಡಾಟದ ಅನುಭವವುಳ್ಳ ಮಣ್ಣೆ ಗ್ರಾಮದ ಇತಿಹಾಸ, ಕಲೆಯನ್ನು ಕುರಿತಂತೆ ಬರೆದಿರುವ ಈ ಪುಸ್ತಕ ಸ್ಥಳೀಯ ಚರಿತ್ರೆಯ ರಚನಕಾರರಿಗೆ ಮಾದರಿಯಾಗಿದೆ. ಕರ್ನಾಟಕದ ಸಾವಿರಾರು ಪ್ರಾಚೀನ ಗ್ರಾಮಗಳ ಚರಿತ್ರೆಯು ಈ ರೀತಿಯೇ ಬೆಳಕಿಗೆ ಬಂದರೆ ಎಂತೆತಹ ಆಶ್ಚರ್ಯಕರ ವಿಷಯಗಳು ಬೆಳಕಿಗೆ ಬರುತ್ತವೆಯೊ!. ಸ್ಥಳೀಯ ಚರಿತ್ರೆಯ ಅಧ್ಯಯನದಲ್ಲಿ ಡಾ. ಎಚ್.ಎಸ್. ಗೋಪಾಲರಾವ್ ಅವರದ್ದು ಪಳಗಿದ ಕೈ. ಇವರು ಬಳಸುವ ಭಾಷೆ ಯಾವುದೇ ಗೊಂದಲ–ಗೋಜಲುಗಳಿಲ್ಲದೆ ಸರಳವಾಗಿ ವಿಷಯವನ್ನು ಮುಟ್ಟಿಸುವ ಶೈಲಿಯದ್ದು."[೨] ಶಿವಗಂಗೆ, ಮಣ್ಣೆ, ಸಿದ್ಧರಬೆಟ್ಟ, ಮಹಿಮಾಪುರಗಳ ಬಗ್ಗೆಯೂ ಅಧ್ಯಯನ ನಡೆಸಿರುವ ಎಚ್.ಎಸ್.ಜಿ. ನೆಲಮಂಗಲ ತಾಲ್ಲೂಕಿನ ಮಣ್ಣಿನ ಕಣಕಣಗಳನ್ನೂ ಚೆನ್ನಾಗಿ ಬಲ್ಲವರು. ಇದಕ್ಕೆ ಈ ಕೃತಿಯೇ ಸಾಕ್ಷಿ.

"ಮಣ್ಣೆಯ ಕುರಿತು ಪರಿಚಯಾತ್ಮಕ ಕೃತಿಯನ್ನು ಸಿದ್ಧಪಡಿಸುವಾಗ, ಮಣ್ಣೆಯಲ್ಲಿ ದೊರೆತ ಶಾಸನಗಳು, ಉಳಿದಿರುವ ಐತಿಹಾಸಿಕ ಸ್ಮಾರಕಗಳು, ಮಣ್ಣೆಯನ್ನು ಉಲ್ಲೇಖಿಸುವ ಬೇರೆಡೆ ದೊರೆತಿರುವ

**1. ಸಂಶೋಧಕರು,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,ಮಾನಸ ಗಂಗೋತ್ರಿ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.**

ಶಾಸನಗಳು ಇತ್ಯಾದಿ ಶಾಸನಸ್ಥ ದಾಖಲೆಗಳ ಹಿನ್ನೆಲೆಯಲ್ಲಿ ಈಗಾಗಲೇ ಆಗಿರುವ ಅಧ್ಯಯನಗಳನ್ನು ಗಮನದಲ್ಲಿಟ್ಟುಕೊಂಡು, ಉಳಿದಿರುವ ಐತಿಹಾಸಿಕ ಸ್ಮಾರಕಗಳನ್ನು ಕುರಿತು ಶಾಸನಗಳೇನನ್ನಾದರೂ ಉಲ್ಲೇಖಿಸಿದ್ದರೆ, ಅವುಗಳ ಪ್ರಯೋಜನವನ್ನು ಪಡೆದುಕೊಂಡು, ಸ್ಮಾರಕಗಳ ಬಗ್ಗೆ ಜನರಿಗಿರುವ ಅಭಿಪ್ರಾಯಗಳನ್ನು ಸಂಗ್ರಹಿಸಿ ವಿವರವಾಗಿ ಮತ್ತು ವಿಶ್ಲೇಷಣಾತ್ಮಕವಾಗಿ ಬರೆಯಲಾಗಿದೆ. ಇಲ್ಲಿಯೂ ಕ್ಷೇತ್ರಕಾರ್ಯ ಮುಖ್ಯವಾಯಿತು. ಕ್ಷೇತ್ರಕಾರ್ಯದ ಕಾರಣದಿಂದಾಗಿಯೇ ಮಣ್ಣೆಯ ಯುದ್ಧಭೂಮಿಯನ್ನು ಗುರುತಿಸಲು ಸಾಧ್ಯವಾಯಿತು."[೩] ಎನ್ನುವ ಅವರ ಮಾತುಗಳು ಸ್ಥಳಧ್ಯಯನದಲ್ಲಿ ಕ್ಷೇತ್ರಕಾರ್ಯದ ಮಹತ್ವವನ್ನು ಸಾರುವುದಲ್ಲದೆ ಅವರ ಸಂಶೋಧನಾ ವೈಖರಿಯನ್ನು ಪ್ರತಿಬಿಂಬಿಸುತ್ತವೆ. ಡಾ. ನಾಗರಾಜು ಅವರ ಮುನ್ನುಡಿ ಮಣ್ಣೆಯ ಸ್ಥಳನಾಮ,ರಾಜಕೀಯ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ಪರಿಚಯಿಸುತ್ತದೆ.

'ಮಣ್ಣೆ ಒಂದು ಪರಿಚಯಾತ್ಮಕ ಅಧ್ಯಯನ'ದಲ್ಲಿ ಸುಮಾರು ಅರ್ಧಶತಮಾನಗಳಷ್ಟು ಹಿಂದೆ ಕೆಲವೇ ವಿದ್ವಾಂಸರಿಗಷ್ಟೇ ಪರಿಚಿತವಾಗಿದ್ದ ಮಣ್ಣೆಯ ಬಗ್ಗೆ ತಮಗೆ ಆಸಕ್ತಿ ಮೂಡಲು ಕಾರಣವಾದ ಅಂಶಗಳ ಬಗ್ಗೆ ತಿಳಿಸಿದ್ದಾರೆ. ಅವರ ಚಿಕ್ಕಪ್ಪ ನಾಗರಾಜರಾವ್ ಎಚ್.ಎಸ್. ಅವರಿಂದ ಮಣ್ಣೆಯ ಬಗ್ಗೆ ಆಸಕ್ತಿ ಮೂಡಿದ ಸಂದರ್ಭದಲ್ಲೇ ಐತಿಹಾಸಿಕ ಸ್ಥಳಗಳ ಬಗ್ಗೆ ಲೇಖನಗಳನ್ನು ಪ್ರಕಟಿಸುತ್ತಿದ್ದ 'ಕನ್ನಡಪ್ರಭ' ಸಾಪ್ತಾಹಿಕ ಸಂಚಿಕೆಗಾಗಿ ಮಣ್ಣೆ ಕುರಿತು ಲೇಖನ ಬರೆಯಲು ಆರಂಭವಾದ ಮಣ್ಣೆಯ ಜೊತೆಗಿನ ಸಂಪರ್ಕ ಲೇಖನ ಬರೆದ ನಂತರ ಕೊನೆಯಾಗದೆ ಮುಂದುವರೆದು, ಆ ಬಗ್ಗೆ ಒಂದು ಕೃತಿ ಬರೆಯುವಷ್ಟು ಗಾಢವಾದದ್ದು ಇತಿಹಾಸಕ್ಕಾದ ಲಾಭವೆನ್ನಬಹುದು. ಮಣ್ಣೆಯ ಜೊತೆಗಿನ ಈ ನಿರಂತರ ಒಡನಾಟ ಅನೇಕ ಹೊಸ ವಿಷಯಗಳು ಬೆಳಕಿಗೆ ಬರಲು ಕಾರಣವಾಗಿದ್ದು, "ಮೊದಲಿಗೆ ಕಾಲಾನುಕ್ರಮಣಿಕೆಯಲ್ಲಿ ಶಾಸನಗಳನ್ನು ಪರಿಶೀಲಿಸುತ್ತಾ, ಮಣ್ಣೆಗೂ ರಾಜಕೀಯ ಇತಿಹಾಸಕ್ಕೂ ಇರುವ ಸಂಬಂಧಗಳನ್ನು ತಿಳಿಯಲು ಪ್ರಯತ್ನಿಸುತ್ತಲೇ ಸಾಂಸ್ಕೃತಿಕ ಇತಿಹಾಸವನ್ನು ಪರಿಚಯಿಸಿ, ನಂತರ ಸಾಮಾಜಿಕ ಇತಿಹಾಸ ಹಾಗೂ ಮಣ್ಣೆಯ ಶಾಸನಗಳಲ್ಲಿನ ಸಾಹಿತ್ಯಾತ್ಮಕ ವಿಚಾರಗಳನ್ನು ಪರಿಚಯಿಸುವುದು"[೪] ಅವರ ಈ ಕೃತಿಯ ಉದ್ದೇಶವಾಗಿದೆ.

ಮಣ್ಣೆಯ ರಾಜಕೀಯ ಇತಿಹಾಸದ ಬಗ್ಗೆ ಚರ್ಚಿಸುತ್ತಾ, ಮೊದಲ ಬಾರಿಗೆ ಮಣ್ಣೆಯ ಖಚಿತ ಪ್ರಸ್ತಾಪವಿರುವ ಕ್ರಿ.ಶ. ೭೫೦ರ ಶ್ರೀಪುರುಷನ ಜಾವಳಿ ಶಾಸನ ಮಣ್ಣೆಯ ರಾಜಕೀಯ ಇತಿಹಾಸ ಅರಿಯಲು ಬಹಳ ಪ್ರಮುಖ ದಾಖಲೆಯಾಗಿದ್ದು, ಆ ಕಾಲಕ್ಕಾಗಲೇ ಮಣ್ಣೆಯು ಒಂದು ಪ್ರಮುಖ 'ವಿಜಯಸ್ಕಂಧಾವಾರ' ಅಂದರೆ 'ಯುದ್ಧದ ನೆಲೆ'ಯಾಗಿದ್ದು ರಾಷ್ಟ್ರಕೂಟರ ನಡುವಿನ ಸುದೀರ್ಘ

ಸಂಘರ್ಷದ ಸಂದರ್ಭದಲ್ಲಿ ಮಣ್ಣೆ ಗಂಗರ ಸೈನ್ಯದ ನೆಲೆಬೀಡಾಗಿ ಪ್ರಮುಖ ಪಾತ್ರ ವಹಿಸಿದ್ದ ಬಗ್ಗೆ ಪ್ರಸ್ತಾಪಿಸಿದ್ದಾರೆ.

ಮುಂದಿನ ಅಧ್ಯಾಯದಲ್ಲಿ ಮಣ್ಣೆಯಲ್ಲಿ ದೊರೆತ ಶಾಸನಗಳು ಮತ್ತು ಮಣ್ಣೆಗೆ ಸಂಬಂಧಿಸಿದ ಮಣ್ಣೆಯಿಂದ ಹೊರಗೆ ದೊರೆತಿರುವ ಶಾಸನಗಳ ಬಗ್ಗೆ ಚರ್ಚಿಸಿದ್ದಾರೆ. ೧೯೯೬ರಲ್ಲಿ ಮಣ್ಣೆಯ ಸಮೀಪದ ಮರಳುಕುಂಟೆಯ ದುಗ್ಗಲಮ್ಮನ ಗುಡ್ಡದ ಬಳಿಯಲ್ಲಿ ದೊರೆತ ಶಾಸನದಿಂದ ಮಣ್ಣೆಯ ಜೊತೆಗಿನ ಎರಡನೇ ಶಿವಮಾರನ ಸಂಪರ್ಕ ತಿಳಿದುಬರುತ್ತದೆ. ಮಣ್ಣೆಯ ಕೋಟೆಕಾಳಗದಲ್ಲಿ ಮಡಿದ 'ಪರಮ' ಎಂಬ ವೀರನ ಗೌರವಾರ್ಥ ಅವನ ಮಗ ಸಿಙ್ಗಟಿಗ ದಾನ ನೀಡಿದ್ದನ್ನು ತಿಳಿಸುವ ಈ ಶಾಸನದಲ್ಲಿ 'ಕೋಟೆಕಾಳಗ'ದ ಪ್ರಸ್ತಾಪ ಇರುವುದನ್ನು ಉಲ್ಲೇಖಿಸಿ 'ದುಗ್ಗಲಮ್ಮನ ಗುಡ್ಡ'ದ ಬಳಿಯೇ ಈ ಕೋಟೆ ಇದ್ದಿರಬಹುದು ಎಂದು ಊಹಿಸಿದ್ದಾರೆ. ೨೦೦೬ರಲ್ಲಿ ದೊರೆತ ಒಂದು ಶಾಸನದಿಂದ ಮಣ್ಣೆಯಲ್ಲಿ ಒಂದು 'ಪರ್ವತಶ್ರೇಣಿ' ಇದ್ದ ಹಾಗೂ ಕ್ರಿ.ಶ. ೮೦೧ರ ಕಾಲಘಟ್ಟದ ಮಾರಸಿಂಹನ ಶಾಸನದಿಂದ ಮಣ್ಣೆಯಲ್ಲಿ 'ಸೂರ್ಯ ದೇವಾಲಯ'ವೊಂದನ್ನು ಅಲ್ಲಿನ ಶ್ರೇಷ್ಠಿಗಣ ನಿರ್ಮಾಣ ಮಾಡಿಸಿದ್ದ ಅಂಶ ಬೆಳಕಿಗೆ ಬಂದಿದನ್ನು ತಿಳಿಸಿದ್ದಾರೆ.

ಮೇಲೆ ತಿಳಿಸಿದ ಶಾಸನದ ಕಾಲಘಟ್ಟಕ್ಕೆ ಸೇರಿದ ಶಾಸನವೊಂದು ಹದಿನೆಂಟು ದೇವಭೋಗದವರ(ದೇವರಿಗೆ ವಿವಿಧ ಸೇವೆ ಸಲ್ಲಿಸುವವರು) ಬಗ್ಗೆ ಪ್ರಸ್ತಾಪಿಸಿರುವ ಅಂಶದ ಆಧಾರದ ಮೇಲೆ ಮಣ್ಣೆಯಲ್ಲಿ ಹದಿನೆಂಟು ದೇವಾಲಯಗಳಿದ್ದಿರಬಹುದು ಎಂದು ಊಹಿಸಿ ಅವಶೇಷಗಳ ಆಧಾರದ ಅವುಗಳನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಶಾಸನಗಳಲ್ಲಿ ಪ್ರಸ್ತಾಪಿತವಾಗಿರುವ ಮಣ್ಣೆಯಲ್ಲಿ ಗಂಗ ಮಾರಸಿಂಹನ ಕಾಲದಲ್ಲಿ ಶ್ರೀವಿಜಯ ಕಟ್ಟಿಸಿದನೆಂದು ಹೇಳಲಾಗುವ ಹಾಗೂ ರಾಷ್ಟ್ರಕೂಟ ದೊರೆ ಪ್ರಭೂತವರ್ಷ ದಾನ ನೀಡಿದ ಜಿನಾಲಯ ಯಾವುದು ಎಂಬ ಪ್ರಶ್ನೆಗಳು ಹುಟ್ಟಿಕೊಂಡು, ಆ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ನಿಟ್ಟಿನಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಸೂಕ್ಷ್ಮವಾಗಿ ಪರಿಶೀಲಿಸಿದಾಗ 'ಸೂಳೆಯರ ಗುಡಿ' ಎಂದು ಕರೆಯಲ್ಪಡುವ ದೇವಾಲಯವೇ ಆ ಜಿನಾಲಯ ಎಂಬುದನ್ನು ಕಂಡುಕೊಂಡ ಬಗ್ಗೆ ದಾಖಲಿಸಿದ್ದಾರೆ.

ಈ ಜಿನಾಲಯವನ್ನು ನಿರ್ಮಿಸಿದ ಶ್ರೀವಿಜಯ ಮತ್ತು ಕವಿರಾಜಮಾರ್ಗದ ರಚನೆಕಾರ ಶ್ರೀವಿಜಯ ಇಬ್ಬರೂ ಒಂದೇ ಎಂಬ ಆಭಿಪ್ರಾಯವಿದ್ದು, ಈ ಅಭಿಪ್ರಾಯ ಸಾಧಿತವಾದರೆ ಕನ್ನಡ ಸಾಂಸ್ಕೃತಿಕ ಜಗತ್ತಿಗೆ

ದೊಡ್ಡ ಕೊಡುಗೆಯಾಗುತ್ತದೆ. ಆದ್ದರಿಂದ ಸಾಂಸ್ಕೃತಿಕವಾಗಿ ಪ್ರಮುಖವಾದ ಮಣ್ಣೆಯ ಈ ಬಸದಿಯನ್ನು ಕುರಿತು ವಿವಿಧ ಆಯಾಮಗಳಲ್ಲಿ ವಿಸ್ತೃತ ಚರ್ಚೆ ನಡೆಯಬೇಕಾದ ಅಗತ್ಯತೆಯನ್ನು ಒತ್ತಿ ಹೇಳಿದ್ದಾರೆ.

ಮಣ್ಣೆಯ ಎಲ್ಲಾ ಆಯಾಮಗಳ ಪರಿಚಯ ಮಾಡಿಕೊಡುವ ಈ ಕೃತಿ ಇದಾಗಿದ್ದು,ಎಚ್.ಎಸ್.ಜಿ. ಅವರ ಅರ್ಧ ಶತಮಾನಗಳ ಸಂಶೋಧನೆಯ ಫಲ. ಅವರ ಪರಿಶ್ರಮ ಮತ್ತು ತಾಳ್ಮೆಯ ಪ್ರತೀಕವಾಗಿದ್ದು. ಸ್ಥಳನಾಮಗಳ ಅಧ್ಯಯನ ಮಾಡಬಯಸುವ ಸಂಶೋಧಕರಿಗೆ ಉತ್ತಮ ಮಾರ್ಗದರ್ಶಕ ಕೃತಿ. ಎಚ್.ಎಸ್.ಜಿ. "ಯಾವುದೇ ಒಂದು ಶಾಸನದ ಬಗ್ಗೆ ಅಥವಾ ಗ್ರಾಮದ ಬಗ್ಗೆ ಹೇಳಿದರೆ ಆಮೂಲಾಗ್ರವಾಗಿ ಅಧ್ಯಯನ ನಡೆಸಿ ಗಂಭೀರವಾದ ವಿಷಯಗಳನ್ನು ತಿಳಿಸುತ್ತಿದ್ದರು. ಒಂದು ಗ್ರಾಮದ ಅಥವಾ ಒಂದು ಸ್ಥಳದ ಇತಿಹಾಸವನ್ನು ಸಂಪೂರ್ಣ ಅಧ್ಯಯನ ಮಾಡಿ ಅಲ್ಲಿನ ಜನತೆಗೆ ವಿವರಿಸಿ ಹೇಳುತ್ತಿದ್ದರು. ಇದರಿಂದ ಸುತ್ತಮುತ್ತಲಿನ ಜನರು ಉತ್ಸಾಹದಿಂದ ತಮ್ಮೂರಿನ ಇತಿಹಾಸವನ್ನು ಕೇಳಿ ಪುಲಕಿತರಾಗುತ್ತಿದ್ದರು. ಇವರು ಹೇಳುತ್ತಿದ್ದರೆ ನಮಗೆ ಅದು ಕೌತುಕವಾಗಿ ಕಾಣುತ್ತಿತ್ತು."[೪] ಎಂದು ಡಾ. ಭೋಗಣ್ಣ ಅವರು ಹೇಳಿರುವ ಈ ಮಾತುಗಳಲ್ಲಿ ಸ್ಥಳಿಯ ಚರಿತ್ರೆಯ ಅಧ್ಯಯನದಲ್ಲಿ ಅವರಿಗಿದ್ದ ಆಸಕ್ತಿ ಮತ್ತು ಪಾಂಡಿತ್ಯ ವೇದ್ಯವಾಗುತ್ತಿದ್ದು, 'ಮಣ್ಣೆ'ಯ ಬಗೆಗಿನ ಅಧ್ಯಯನ ಇದಕ್ಕೆ ಅತ್ಯುತ್ತಮ ನಿದರ್ಶನವಾಗಿದ್ದು, ಈ ಕೃತಿಯಲ್ಲಿ ಅವರು ಪ್ರಸ್ತಾಪಿಸಿರುವ ಅನೇಕ ಅಂಶಗಳು ಹೊಸ ಹೊಸ ಸಂಶೋಧನೆಗೆ ನಾಂದಿ ಹಾಡುವಂತಹವು ಎಂಬ ವಿಷಯವು ಸ್ಪಷ್ಟವಾಗಿದೆ ಎಂದು ಹೇಳಬಹುದು.

## ಕೊನೆಟಿಪ್ಪಣಿ


೧. ಪು.ಸಂ.೫, ಮರೆಯಲಾಗದ ಮಣ್ಣೆ, ಮಣ್ಣೆ–ಒಂದು ಪರಿಚಯಾತ್ಮಕ ಅಧ್ಯಯನ, ಎಚ್.ಎಸ್. ಗೋಪಾಲರಾವ್, ಅಭಿನವ ಪ್ರಕಾಶನ, ೨೦೨೧

೨. ಪು.ಸಂ.೩೨, ಬಹುಶಿಸ್ತುಗಳ ಸಂಗಮ ಡಾ.ಎಚ್.ಎಸ್.ಗೋಪಾಲರಾವ್, ಡಾ.ಡಿ.ವಿ. ಪರಮಶಿವಮೂರ್ತಿ, ಬಹುಮುಖಿ, ಪ್ರ.ಸಂ. ಡಾ. ಡಿ.ವಿ. ಪರಮಶಿವಮೂರ್ತಿ,ಎಚ್.ಎಸ್. ಗೋಪಾಲರಾವ್ ಅಭಿನಂದನಾ ಸಮಿತಿ, ೨೦೨೨

೩. ಪು.ಸಂ. ೧೧, ಬದುಕು–ಬರಹ;ಹೋರಾಟ ಮತ್ತು ಹುಡುಕಾಟ, ಎಚ್.ಎಸ್. ಗೋಪಾಲರಾವ್, ಬಹುಮುಖಿ, ಪ್ರ.ಸಂ. ಡಾ. ಡಿ.ವಿ. ಪರಮಶಿವಮೂರ್ತಿ, ಎಚ್.ಎಸ್. ಗೋಪಾಲರಾವ್ ಅಭಿನಂದನಾ ಸಮಿತಿ, ೨೦೨೨

೪. ಪು.ಸಂ ೮, ಮಣ್ಣೆ ಒಂದು ಪರಿಚಯಾತ್ಮಕ ಅಧ್ಯಯನ, ಅಭಿನವ ಪ್ರಕಾಶನ, ೨೦೨೧

೫. ಪು.ಸಂ. ೧೨೮, ಸರಳ ಸಜ್ಜನಿಕೆಯ ಇತಿಹಾಸ ಸಂಶೋಧಕ, ಡಾ. ಭೋಗಣ್ಣ, ಸೃಜನಶೀಲ, ಪ್ರ.ಸಂ. ಎನ್.ಜಿ. ಗೋಪಾಲ್, ಸಮಾನ ಮನಸ್ಕರ ವೇದಿಕೆ, ೨೦೨೪

## ಪರಾಮರ್ಶನ ಗ್ರಂಥಗಳು


೧. ಮಣ್ಣೆ–ಒಂದು ಪರಿಚಯಾತ್ಮಕ ಅಧ್ಯಯನ, ಎಚ್.ಎಸ್. ಗೋಪಾಲರಾವ್, ಅಭಿನವ ಪ್ರಕಾಶನ, ೨೦೨೧

೨. ಬಹುಮುಖಿ, ಪ್ರ.ಸಂ. ಡಾ.ಡಿ.ವಿ.ಪರಮಶಿವಮೂರ್ತಿ, ಎಚ್.ಎಸ್.ಗೋಪಾಲರಾವ್ ಅಭಿನಂದನಾ ಸಮಿತಿ, ೨೦೨೨

೩. ಸೃಜನಶೀಲ, ಪ್ರ.ಸಂ. ಎನ್.ಜಿ.ಗೋಪಾಲ್, ಸಮಾನ ಮನಸ್ಕರ ವೇದಿಕೆ, ನೆಲಮಂಗಲ, ೨೦೨೪